# ಕರ್ನಾಟಕ ಲೋಕಾಯುಕ್ತ

ಕಂಪ್ಲೆಂಟ್/ಉಪಲೋಕ್/ಜಿಎಲ್‌ಬಿ/1605-2021
ಮಂಡನಾಧಿಕಾರಿಗಳ ಶಾಖೆ

ಬಹುಮಹಡಿಗಳ ಕಟ್ಟಡ
ಡಾ. ಬಿ.ಆರ್.ಅಂಬೇಡ್ಕರ್ ವೀದಿ, ಬೆಂಗಳೂರು,
ದಿನಾಂಕ: 04/12/2021.

## ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 12(3) ರನ್ವಯ ಶಿಫಾರಸ್ಸು ವರದಿ

**ವಿಷಯ: ಶ್ರೀ ನಾಗಪ್ಪ ಚೂರಿ ಬಿನ್ ಶ್ರೀ ರಂಗಪ್ಪ @ ಮುದುಕಪ್ಪ ಚೂರಿ, ಗ್ರಾಮ ಲೆಕ್ಕಾಧಿಕಾರಿ, ಕಂದಕೂರು, ಕುಷ್ಟಗಿ ತಾಲ್ಲೂಕು, ಕೊಪ್ಪಳ ಜಿಲ್ಲೆ,** – ಆದ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದು, ದುರ್ನಡತೆ ಎಸಗಿರುವ ಬಗ್ಗೆ ಇವರ ವಿರುದ್ಧ ನಡವಳಿ ಕುರಿತು.

----

1. ಪೋಲೀಸ್ ಇನ್ಸ್‌ಪೆಕ್ಟರ್, ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆ, ಕೊಪ್ಪಳ, (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ). ಇವರು ಸಲ್ಲಿಸಿದ ತನಿಖಾವರದಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ, ಸದರಿ ವರದಿಯಲ್ಲಿ **ಶ್ರೀ ನಾಗಪ್ಪ ಚೂರಿ ಬಿನ್ ಶ್ರೀ ರಂಗಪ್ಪ @ ಮುದುಕಪ್ಪ ಚೂರಿ, ಗ್ರಾಮ ಲೆಕ್ಕಾಧಿಕಾರಿ, ಕಂದಕೂರು, ಕುಷ್ಟಗಿ ತಾಲ್ಲೂಕು, ಕೊಪ್ಪಳ ಜಿಲ್ಲೆ,** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ದೂರುದಾರರಾದ **ಶ್ರೀ ಮಹ್ಮದಸಾಬ ಬಿನ್ ಬಾಲೇಸಾಬ ಮುಲ್ಲಾ, ಹೇರೂರು ಗ್ರಾಮ, ತಾ: ಗಂಗಾವತಿ, ಕೊಪ್ಪಳ ಜಿಲ್ಲೆ,** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಭೇಟಿ ಮಾಡಿದಾಗ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಅದನ್ನು ಪಡೆದು, ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984, ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂ ಪ್ರೇರಿತ ತನಿಖೆಯನ್ನು ಕೈಗೊಂಡಿರುತ್ತಾರೆ.

2. **ದೂರಿನ ಸಂಕ್ಷಿಪ್ತ ಮಾಹಿತಿ :-**

i). ದೂರುದಾರರು ದಿನಾಂಕ: 06-3-2017 ರಂದು ಯಲಬುರ್ಗಾ ತಾಲ್ಲೂಕು, ತಿಪ್ಪನಾಳ ಗ್ರಾಮದ ಶ್ರೀ ಬಾಷುಸಾಬ ರಿಂದ ಸರ್ವೇ ನಂ: 29/10 ರಲ್ಲಿ ವಿಸ್ತೀರ್ಣ 1 ಎಕರೆ 31 ಗುಂಟೆ ಜಮೀನನ್ನು ಖರೀದಿಸಿರುತ್ತಾರೆ. ನಂತರ, ದೂರುದಾರರು ಅವರ ಜೊತೆ ತನ್ನ ಸ್ನೇಹಿತ ಬೋಗಪ್ಪ ರವರನ್ನು ಕರೆದುಕೊಂಡು, ಎದುರುದಾರರನ್ನು ಭೇಟಿಯಾಗಿ ಜಮೀನಿಗೆ ಸಂಬಂಧಪಟ್ಟ ಮುಟೇಶನ್

ಸಲುವಾಗಿ ವಿಚಾರಿಸಿದಾಗ, ಎದುರುದಾರರು ಜೆ ಫಾರ್ಮ ಬಂದಿದೆ ಇನ್ನು ಟೈಂ ಇದೆ, ಮುಟೇಶನ್ ಮಾಡಲು 5-6 ಸಾವಿರ ರೂ. ಕೊಡಬೇಕು ಎಂದು ಹೇಳಿದಾಗ, ದೂರುದಾರರು ತನಗೆ ಹಣ ಕೊಡಲು ಆಗುವುದಿಲ್ಲ ಸರ್ ಎಂದು ಹೇಳಿದಾಗ, ಎದುರುದಾರರು ಬೇರೆ ಕಡೆ ಬೇಕಾದರೆ ಮಾಡಿಸಿಕೊಳ್ಳಿರಿ ಎಂದು ಹೇಳಿರುತ್ತಾರೆ. ದೂರುದಾರರು ಮುಟೇಶನ್ ಮಾಡಿಕೊಡಲು ಖರ್ಚು 5-6 ಸಾವಿರ ರೂ. ಕೊಡದಿದ್ದರೆ ಎದುರುದಾರರು ಕೊಪ್ಪಳಕ್ಕೆ ಬರೆದು ಕಳಿಸುತ್ತೇನೆಂದು, ನೀವು ಅಲ್ಲಿಯೇ ಮಾಡಿಸಿಕೊಳ್ಳಿ ಎಂದು ಸಹ ಹೇಳಿರುತ್ತಾರೆ. ಹಾಗೂ ದೂರುದಾರರು ಹಣವನ್ನು ಕೊಟ್ಟರೆ, ಏನಾದರೂ ತಪ್ಪುಗಳಿದ್ದರೆ ಎದುರುದಾರರೆ ಸರಿಪಡಿಸಿ, ಮುಟೇಶನ್ ಮಾಡಿಸಿಕೊಡುತ್ತೇನೆಂದು ಹೇಳಿ ದೂರುದಾರರನ್ನು ಹಣಕ್ಕೆ ಒತ್ತಾಯಿಸಿರುತ್ತಾರೆ. ದಿನಾಂಕ: 21-3-2017 ರಂದು ದೂರುದಾರರು ತಮ್ಮ ಮೊಬೈಲ್ ಸಂಖ್ಯೆ : 7406531483 ರಿಂದ ಎದುರುದಾರರ ಮೊಬೈಲ್ ನಂ: 9880173860 ಗೆ ದೂರುದಾರರ ಸ್ನೇಹಿತ ಬೋಗಪ್ಪ ಮುಟೇಶನ್ ಸಲುವಾಗಿ, ವಿಚಾರಿಸಿ ಮಾತನಾಡಿದಾಗ, ಎದುರುದಾರರು ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುವುದು ದೂರುದಾರರ ಮೊಬೈಲ್‌ನಲ್ಲಿ ರೆಕಾರ್ಡ್ ಆಗಿರುತ್ತದೆ. ದೂರುದಾರರಿಗೆ ಲಂಚದ ಹಣ ನೀಡಲು ಮನಸ್ಸಿಲ್ಲವಾದರಿಂದ ದಿನಾಂಕ: 23-3-2017 ರಂದು ಕೊಪ್ಪಳ ಎಸಿಬಿ ಪೊಲೀಸ್ ಠಾಣೆಗೆ ದೂರು ಸಲ್ಲಿಸಿದ್ದು, ಸದರಿ ದೂರು ಠಾಣಾ ಗುನ್ನೆ ನಂ: 01/2017 ರಲ್ಲಿ ಕಲಂ 7, 13(1)(ಡಿ) ಸಹಿತ 13(2) ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ 1988 ಅಡಿಯಲ್ಲಿ ದಾಖಲಾಗಿರುತ್ತದೆ.

ii). ತದನಂತರ ತನಿಖಾಧಿಕಾರಿಗಳು ಪಂಚರಾದ 1) ಅಬ್ದುಲ್ ಅಜೀಜ್ ಸಾಬ್ ಪಂಚ-1 2) ಯುವರಾಜ ಪಂಚ-2 ಇವರುಗಳನ್ನು ಬರಮಾಡಿಕೊಂಡಿದ್ದು, ದೂರುದಾರರನ್ನು ಪರಿಚಯಿಸಿ, ದೂರಿನ ವಿಚಾರವನ್ನು ತಿಳಿಸಿರುತ್ತಾರೆ ಹಾಗೂ ಸದರಿಯವರುಗಳ ಸಮಕ್ಷಮ ದೂರುದಾರರು ಮತ್ತು ಎದುರುದಾರರ ಸಂಭಾಷಣೆ ಇದ್ದ ಮೊಬೈಲ್‌ನ್ನು ಹಾಗೂ ಲಂಚದ ಹಣ 4000/- ರೂ.ಗಳನ್ನು ಹಾಜರುಪಡಿಸಿರುತ್ತಾರೆ. ದೂರುದಾರರು ಹಾಜರುಪಡಿಸಿದ ಹಣದ ಮುಖ ಬೆಲೆ 500/- ರೂ.ಗಳ 8 ನೋಟುಗಳನ್ನು ಪಂಚರು ಪರಿಶೀಲಿಸಿ ಪಂಚ-2 ಹೇಳಿದಂತೆ, ಪಂಚ-1 ರವರು ಬಿಳಿ ಹಾಳೆಯಲ್ಲಿ ಸದರಿ ಮೌಲ್ಯ ಮತ್ತು ನೋಟುಗಳ ನಂಬರುಗಳನ್ನು ಬರೆದುಕೊಂಡಿರುತ್ತಾರೆ. ತನಿಖಾಧಿಕಾರಿಯ ಸೂಚನೆ ಮೇರೆಗೆ, ಸದರಿ ನೋಟುಗಳಿಗೆ ಪೊಲೀಸ್ ಸಿಬ್ಬಂದಿಯಿಂದ ಫಿನಾಫ್ತಲೀನ್ ಪೌಡರನ್ನು ಲೇಪಿಸಿರುತ್ತಾರೆ. ತನಿಖಾಧಿಕಾರಿಯ ಸೂಚನೆ ಮೇರೆಗೆ ಪಂಚ-1 ರವರು ಸದರಿ ಹಣವನ್ನು ಪರಿಶೀಲಿಸಿ ದೂರುದಾರರ ಶರ್ಟಿನ ಎಡ ಜೇಬಿನಲ್ಲಿ ಇಟ್ಟಿರುತ್ತಾರೆ. ತನಿಖಾಧಿಕಾರಿ ದೂರುದಾರರಿಗೆ ಸೂಚನೆಯನ್ನು ನೀಡಿ, ಎದುರುದಾರರು ಲಂಚದ ಹಣವನ್ನು ಕೇಳಿ ಪಡೆದರೆ. ನಂತರ ದೂರುದಾರರು ತನ್ನ ಬಲಗೈಯಿಂದ ತನ್ನ ತಲೆಯ ಮೇಲಿನ ಕೂದಲನ್ನು ಮೂರು ಸಾರಿ ಮೇಲ್ಕಕೇರಿಸುವ ಮೂಲಕ ಸೂಚನೆ ನೀಡಬೇಕೆಂದು ತಿಳಿಸಿರುತ್ತಾರೆ. ನಂತರ ತನಿಖಾಧಿಕಾರಿ ದೂರುದಾರರಿಗೆ ವಾಯ್ಸ್ ರೆಕಾರ್ಡರ್‌ನ್ನು ಕೊಟ್ಟು ಅದನ್ನು ಉಪಯೋಗಿಸುವ ವಿಧಾನವನ್ನು ತಿಳಿಸಿ, ಆ ಸಂಬಂಧವಾಗಿ ಪ್ರಾಯೋಗಿಕ ಪಂಚನಾಮೆಯನ್ನು ದಿ: 23/3/2017ರಂದು ಬೆ: 10.30 ರಿಂದ 12.30 ರವರೆಗೆ ಪಂಚರ ಸಮಕ್ಷಮ ಬರೆದಿರುತ್ತಾರೆ.

iii). ಅದೇ ದಿನ ದಿನಾಂಕ: 23-3-2017 ರಂದು ದೂರುದಾರರು ಹಾಗೂ ಆತನ ಸ್ನೇಹಿತ ಬೋಗಪ್ಪ ಮತ್ತು ಪಂಚ-2 ಯುವರಾಜ ರವರುಗಳು ಎದುರುದಾರರಾದ ನಿಮ್ಮ ಕೊಠಡಿಗೆ ಬಂದಾಗ, ಎದುರುದಾರರು ಕೈ ಸನ್ನೆಯಿಂದ ದೂರುದಾರರನ್ನು ಹಣ ತಂದಿದ್ದೀಯಾ ಎಂದು ಕೇಳಿ, ದೂರುದಾರರಿಂದ 4000/- ರೂ. ಫಿನಾಪ್ತಲಿನ್ ಪೌಡರ್ ಲೇಪಿತ ಹಣವನ್ನು ಎದರುದಾರರು ಬಲಗೈಯಿಂದ ಪಡೆದು, ತನ್ನ ಶರ್ಟಿನ ಎಡಗಡೆ ಇರುವ ಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ. ನಂತರ ದೂರುದಾರರು ತನ್ನ ತಲೆಯ ಮೇಲಿನ ಕೂದಲನ್ನು 3 ಬಾರಿ ಮೇಲಕ್ಕೇರಿಸಿಕೊಳ್ಳುವ ಮೂಲಕ ತನಿಖಾಧಿಕಾರಿಗೆ ಸನ್ನೆ ಮಾಡಿರುತ್ತಾರೆ. ಸೂಚನೆಯನ್ನು ಅನುಸರಿಸಿ ತನಿಖಾಧಿಕಾರಿ ಸ್ಥಳಕ್ಕೆ ಬಂದು ದೂರುದಾರರನ್ನು ವಿಚಾರಿಸಿ ಮಾಹಿತಿ ಪಡೆದು, ದೂರುದಾರರು ತನಿಖಾಧಿಕಾರಿಗೆ ಎದುರುದಾರರನ್ನು ತೋರಿಸಿಕೊಟ್ಟ ಮೇರೆಗೆ, ತನಿಖಾಧಿಕಾರಿಯು ತನ್ನನ್ನು ಎದುರುದಾರರಿಗೆ ಪರಿಚಯಿಸಿಕೊಂಡು ವಿಚಾರಣೆ ಮಾಡಿರುತ್ತಾರೆ. ತನಿಖಾಧಿಕಾರಿಯ ಸೂಚನೆ ಮೇರೆಗೆ ಸಿಬ್ಬಂದಿಯು ಎದುರುದಾರರ ಬಲಗೈ ಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಿಂದ ತೊಳೆದಾಗ, ದ್ರಾವಣವು ತಿಳಿ ಗುಲಾಬಿ ಬಣಕ್ಕೆ ಬಂದಿರುತ್ತದೆ. ತನಿಖಾಧಿಕಾರಿಯ ಸೂಚನೆಯ ಮೇರೆಗೆ, ಎದುರುದಾರರು ತಾನು ದೂರುದಾರರಿಂದ ಪಡೆದ ಲಂಚದ ಹಣವನ್ನು ಹಾಜರುಪಡಿಸಿದ್ದು, ಸದರಿ ಹಣವನ್ನು ಪಂಚರು ಪರಿಶೀಲಿಸಿ ನೋಟಿನ ಮೌಲ್ಯ ಮತ್ತು ನಂಬರುಗಳನ್ನು ಪ್ರಾಯೋಗಿಕ ಪಂಚನಾಮೆ ವೇಳೆಯಲ್ಲಿ ಬರೆದ ಪಟ್ಟಿಗೆ ತಾಳೆ ಮಾಡಿ, ಖಾತ್ರಿ ಪಡಿಸಿಕೊಂಡ ನಂತರ, ತನಿಖಾಧಿಕಾರಿ ಸದರಿ ಹಣವನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ಹಾಗೂ ತನಿಖಾಧಿಕಾರಿಯ ಸೂಚನೆಯ ಮೇರೆಗೆ, ಎದುರುದಾರರು ದೂರುದಾರರಿಂದ ಪಡೆದ ಲಂಚದ ಹಣಕ್ಕೆ ಸಮಜಾಯಿಷಿ ನೀಡುವಂತೆ ಸೂಚಿಸಿದ್ದು, ಅದರಂತೆ, ಎದುರುದಾರರು ತನ್ನ ರಕ್ಷಣಾ ಹೇಳಿಕೆಯಲ್ಲಿ .... **"ಈ ದಿನ ಸುಮಾರು 2 ಗಂಟೆಗೆ ಎಸಿಬಿ ಅಧಿಕಾರಿಗಳ ಸಮೇತ ಮಹ್ಮದ್‌ಸಾಬ ಮುಲ್ಲಾ ಎನ್ನುವವರು ನನಗೆ 4000/- ರೂ.ಗಳನ್ನು ಒತ್ತಾಯದಿಂದ ಕೊಟ್ಟಿರುತ್ತಾರೆ. ನಾನು ಹಣ ಕೊಡುವಂತೆ ಯಾವುದೇ ಬೇಡಿಕೆ ಇಟ್ಟಿಲ್ಲ, ಆದರೂ ಅವರು ಈ ದಿನ ಒತ್ತಾಯ ಪೂರ್ವಕವಾಗಿ ಕೈಯಲ್ಲಿ ಇಟ್ಟಿರುತ್ತಾರೆ ಇತ್ಯಾದಿ ವಿವರಣೆಯನ್ನು ಬರೆದುಕೊಟ್ಟಿರುತ್ತಾರೆ. ಸದರಿ ವಿವರಣೆಯ ಬಗ್ಗೆ ತನಿಖಾಧಿಕಾರಿ ದೂರುದಾರರನ್ನು ಕೇಳಲಾಗಿ, ದೂರುದಾರರು ತಾನು ಒತ್ತಾಯಪೂರ್ವಕವಾಗಿ 4000/- ಹಣವನ್ನು ಕೊಟ್ಟಿರುವುದಿಲ್ಲ, ಬದಲಾಗಿ ಅವರು ಸನ್ನೆ ಮಾಡಿ ಅವರಾಗಿ ಕೇಳಿದಂತೆ ನನ್ನ ಸ್ನೇಹಿತ ಭೋಗಪ್ಪ ಹಾಗೂ ಪಂಚ-2 ರವರ ಸಮಕ್ಷಮ ಲಂಚದ ಹಣ ಕೊಟ್ಟಿರುತ್ತೇನೆ ಎಂದು ಹೇಳಿರುತ್ತಾರೆ"**. ನಂತರ, ತನಿಖಾಧಿಕಾರಿ ದೂರುದಾರರ ಕೆಲಸಕ್ಕೆ ಸಂಬಂಧಿಸಿದ ದಾಖಲೆಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ತನಿಖಾಧಿಕಾರಿಯವರು ಸೂಚನೆ ಮೇರೆಗೆ ಸಿಬ್ಬಂದಿ ಎದುರುದಾರರು ತೊಟ್ಟಿದ ಶರ್ಟಿನ ಎಡಗಡೆಯ ಜೇಬಿನ ಒಳಭಾಗವನ್ನು ಸೋಡಿಯಂ ಕಾರ್ಬೋನೈಟ್ ದ್ರಾವಣದಲ್ಲಿ ಅದ್ದಿ ತೊಳೆಸಿದ್ದು ದ್ರಾವಣವು ತಿಳಿಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಸದರಿ ಶರ್ಟನ್ನು ತನಿಖಾಧಿಕಾರಿಯವರು ಅಮಾನತ್ತುಪಡಿಸಿಕೊಂಡಿರುತ್ತಾರೆ. ಈ ಸಂಬಂಧವಾಗಿ, ತನಿಖಾಧಿಕಾರಿ ಹಣ ಜಪ್ತು ಪಂಚನಾಮೆಯನ್ನು ದಿ: 23/3/2017 ರಂದು ಮ: 2.10 ರಿಂದ ಸ: 6.30 ರವರೆಗೆ ಹಿರೇವಂಕಲಕುಂಟ ಗ್ರಾಮದ ಕಂದಾಯ ನಿರೀಕ್ಷಕರ ವಸತಿ ಗೃಹದ ಗ್ರಾಮ ಲೆಕ್ಕಾಧಿಕಾರಿ ಗಾಣದಾಳ ಇವರ ಕೊಠಡಿಯಲ್ಲಿ ಬರೆದಿರುತ್ತಾರೆ.

iv). ಸಿಡಿಗಳಲ್ಲಿ ದಾಖಲಾದ ಸಂಭಾಷಣೆ ದೂರುದಾರರ ಹಾಗೂ ಎದುರುದಾರರ ಧ್ವನಿಗೆ, ಹಾಗೂ ಮಾದರಿ ಧ್ವನಿಗೆ ಹೋಲಿಕೆ ಆಗುತ್ತದೆ ಎಂಬುದಾಗಿ ವಿಧಿ ವಿಜ್ಞಾನ ಪ್ರಯೋಗಾಲಯದ ವರದಿಯಿಂದ ದೃಢಪಟ್ಟಿದೆ. ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ತನಿಖಾಧಿಕಾರಿಗಳು ಎದುರುದಾರರಿಂದ ಸಂಗ್ರಹಿಸಿದ ಮುದ್ದೆ ಮಾಲುಗಳಲ್ಲಿ ಫಿನಾಪ್ತಿಲೀನ್ ಅಂಶ ಇರುವುದು ದೃಢಪಟ್ಟಿದೆ.

v. ದಿನಾಂಕ: 11/08/2021ರಂದು ಎದುರುದಾರರಿಂದ ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ / ವಿವರಣೆಯನ್ನು ಕೇಳಲಾಗಿದೆ. ಎದುರುದಾರರು ತನ್ನ ವಿವರಣೆಯನ್ನು ದಿ: 30/8/2021 ರಂದು ತನ್ನ ಲಿಖಿತ ಸಮಜಾಯಿಷಿಯನ್ನು ಸಲ್ಲಿಸಿರುತ್ತಾರೆ. ಎದುರುದಾರರು ನೀಡಿರುವ ಸಮಜಾಯಿಷಿಯನ್ನು ಪರಿಶೀಲಿಸಲಾಗಿ, ಸಮಜಾಯಿಷಿ ಕಂಡಿಕೆ 1 ರಲ್ಲಿ ಪರಿವೀಕ್ಷಣಾ ಟಿಪ್ಪಣಿಯ ಕಂಡಿಕೆ 1 ಹಾಗೂ 3ರ ಅಂಶಗಳನ್ನು ಯಥಾವಥಾಗಿ ದಾಖಲಿಸಿರುತ್ತಾರೆ. ಸಮಜಾಯಿಷಿ ಕಂಡಿಕೆ 2 ರಲ್ಲಿ ಮತ್ತೆ ಪರಿವೀಕ್ಷಣಾ ಟಿಪ್ಪಣಿಯ ಕಂಡಿಕೆ 1 ಮತ್ತು 3ರ ಅಂಶಗಳನ್ನು ಯಥಾ ನಮೂಧಿಸಿರುತ್ತಾರೆ. ಮುಂದುವರೆದು, ಮೊ.ಸಂಖ್ಯೆ: 1/2017 ರಲ್ಲಿ ತನಿಖಾಧಿಕಾರಿಯು ಎದುರುದಾರರ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದು, ಎದುರುದಾರರ ಮೇಲೆ ಅದೇ ಆರೋಪದಡಿಯಲ್ಲಿ, ಈ ಪ್ರಕರಣವನ್ನು ಸಕ್ಷಮ ಪ್ರಾಧಿಕಾರಕ್ಕೆ ವಹಿಸಿದಾಗ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ). ನಿಯಮಾವಳಿಯ 1957ರನ್ವಯ, ದೋಷಾರೋಪಣಾ ಪಟ್ಟಿ ಹೊರಡಿಸಿದ ತರುವಾಯ, ಅದರಲ್ಲಿನ ಆರೋಪಗಳ ಬಗ್ಗೆ, ಅದನ್ನು ಆಧರಿಸುವ ದಾಖಲೆಗಳ ವಿವರಗಳನ್ನು ಈ ಮೇಲಿನ ನಿಯಮಾವಳಿ ಅನ್ವಯ (ಆರೋಪ ಪಟ್ಟಿ ಅನುಬಂಧ 3ರಲ್ಲಿ ನಮೂದಿಸಬೇಕಾಗಿದ್ದು) ಅಂತಹ ದಾಖಲೆಗಳ ಪ್ರತಿಗಳನ್ನು ಶಿಸ್ತು ಕ್ರಮ ವಿಚಾರಣೆಗೆ ನೋಟೀಸಿಗೆ ಉತ್ತರ ನೀಡುವ ಮುನ್ನ ಆಪಾದಿತ ನೌಕರನಿಗೆ ಒದಗಿಸಲು ಕರ್ನಾಟಕ ರಾಜ್ಯ ಸರ್ಕಾರ ಸುತ್ತೋಲೆ ಸಂ: ಸಿಆಸುಇ4ಸೇಇವಿ99 ದಿನಾಂಕ: 09/6/1999 ಅವಕಾಶ ಕಲ್ಪಿಸಿದ್ದು, ಆ ಕಾರಣ ಎದುರುದಾರರ ಮೇಲಿನ ಈ ಪ್ರಕರಣದಲ್ಲಿ ಸಕ್ಷಮ ಶಿಸ್ತು ಪ್ರಾಧಿಕಾರಕ್ಕೆ ವಹಿಸಿದ ನಂತರ, ಪ್ರಾರಂಭಿಸಲಾಗುವ ಶಿಸ್ತು ಕ್ರಮದಲ್ಲಿ ಆರೋಪವನ್ನು ಸಮರ್ಥಿಸುವ ದಾಖಲೆಗಳ ಪ್ರತಿಗಳನ್ನು ದೊರಕಿಸಿಕೊಡುವ ಅವಕಾಶವಿದ್ದು, ಎದುರುದಾರರು ಅವರ ಮೇಲಿನ ಆರೋಪಗಳ ಬಗ್ಗೆ ಪ್ರತಿರಕ್ಷ ಹೇಳಿಕೆ ಸಲ್ಲಿಸಲು ಸಾಧ್ಯವಾಗುವ ಅವಕಾಶವಿರುವುದನ್ನು ನಿವೇದಿಸುತ್ತಾರೆ. ದಿ: 29/7/2021ರ ಪರಿವೀಕ್ಷಣಾ ಟಿಪ್ಪಣಿಗೆ ತನಿಖಾಧಿಕಾರಿಯವರ ವರದಿ ಅನ್ವಯ, ಎದುರುದಾರರಿಗೆ ಸಮಜಾಯಿಷಿಕ್ಕೆ ನೀಡಲು ಕಷ್ಟ ಸಾಧ್ಯವಾಗಿರುವ ಅಂಶವೆಂದು ನಿವೇದಿಸಿರುತ್ತಾರೆ. ಜೊತೆಗೆ, **"ಎದುರುದಾರರು ಈ ಪ್ರಕರಣದಲ್ಲಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ). ನಿಯಮಾವಳಿಯ 1957ರನ್ವಯ ಸಕ್ಷಮ ಶಿಸ್ತು ಪ್ರಾಧಿಕಾರಕ್ಕೆ, ಎದುರುದಾರರ ಮೇಲೆ ಇಲಾಖಾ ವಿಚಾರಣೆ ನಡೆಸಲು ಶಿಫಾರಸ್ಸು ಮಾಡಬಹುದಾಗಿದೆ" ಎಂದು ಕೋರಿದಾರೆ.** ಆ ನಂತರ, ಆ ಸಕ್ಷಮ ಶಿಸ್ತು ಪ್ರಾಧಿಕಾರವು ಈ ಮೇಲ್ಕಂಡ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ). ನಿಯಮಾವಳಿಯ 1957ರನ್ವಯ ನಿಯಮ 11ರಲ್ಲಿನ ಕಾರ್ಯವಿಧಾನದನ್ವಯ ನಡೆಸಲಾಗುವ ವಿಚಾರಣೆಯಲ್ಲಿ ಎದುರುದಾರರು ಅವರ ಪ್ರತಿರಕ್ಷಣಾ ಕಾರ್ಯ ನಿರ್ವಹಿಸುವ ವಿಧಿ ಪೂರ್ವಕ ಅವಕಾಶವಿರುವ ಅಂಶವನ್ನು ಎದುರುದಾರರು ನಿವೇದಿಸಿಕೊಂಡಿರುತ್ತಾರೆ.

3. ಸಾಕ್ಷಿದಾರರ ಹೇಳಿಕೆಗಳು ದೂರು ಅರ್ಜಿ ಹಾಗೂ ತನಿಖಾಧಿಕಾರಿಗಳು ಸಂಗ್ರಹಿಸಿದ ದಾಖಲೆ ಮತ್ತು ಇತರೆ ಅಂಶಗಳನ್ನು ಪರಿಶೀಲಿಸಿದಾಗ, ಎದುರುದಾರರ ವಿರುದ್ದ ನಡವಳಿಯನ್ನು ಕೈಬಿಡಲು ಸೂಕ್ತ ಸಮಂಜಸ / ಸಮಾಧಾನಕರ ಕಾರಣ ಇಲ್ಲವೆಂದು ಅಭಿಪ್ರಾಯಕ್ಕೆ ಬರಲಾಗಿದೆ.

4. ಕಡತದಲ್ಲಿರುವ ಸಂಗತಿಗಳು ಹಾಗೂ ದಾಖಲಾತಿಗಳಿಂದ ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ತೋರಿಸದೆ, ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ವತನೆ / ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

5. ಆದುದರಿಂದ, ಎದುರುದಾರರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯವಳಿ 1966 ರ (ಪ್ರಸ್ತುತ ಕರ್ನಾಟಕ ನಾಗರೀಕ ಸೇವಾ (ನಡೆತೆ) 2021), ನಿಯಮ 3(1) (i) ರಿಂದ (iii)ರ ಉಲ್ಲಂಘನೆಗಾಗಿ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ, ಈ ವರದಿಯ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 14(ಎ) ರಡಿ ಉಪಲೋಕಾಯುಕ್ತರಿಗೆ ವಹಿಸಬೇಕೆಂದು ಕೋರಿದೆ.

6. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

13/12/21

(ನ್ಯಾಯಮೂರ್ತಿ ಬಿ.ಎಸ್.ಪಾಟೀಲ್)
ಉಪಲೋಕಾಯುಕ್ತರು-1
ಕರ್ನಾಟಕ ರಾಜ್ಯ, ಬೆಂಗಳೂರು